Cover Page

INTERNATIONAL JOURNAL OF MULTIDISCIPLINARY EDUCATIONAL RESEARCH
ISSN:2277-7881(Print); IMPACT FACTOR :10.16(2026); IC VALUE:5.16; ISI VALUE:2.286
Peer-Peer Reviewed, Refereed & Open Access International Journal - As per UGC Norms
(Fulfilled Suggests Parameters of UGC by IJMER)
Volume:15, Issue:6(1), June 2026
Scopus Review ID: A2B96D3ACF3FEA2A
Article Received: Reviewed: Accepted
Publisher: Sucharitha Publication, India
Online Copy of Article Publication Available: www.ijmer.in

ತೇಜಸ್ವಿಯವರ ಕಥನ ಸಾಹಿತ್ಯದ ರಂಗರೂಪ ಪ್ರಕ್ರಿಯೆ

ಡಾ. ವಿಜಯೇಂದ್ರ ಕುಮಾರ್ ಜಿ.ಎಲ್.

ಕನ್ನಡ ಸಹ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಶಿಡ್ಲಘಟ್ಟ

ಸಾರಾಂಶ:

ಕೆ.ಪಿ.ಪೂರ್ಣಚಂದ್ರ ತೇಜಸ್ವಿಯವರು ನಾಟಕಕಾರರಿಗಿಂತ ಹೆಚ್ಚಾಗಿ ಪರಿಸರ ಚಿಂತಕರಾಗಿ, ವೈಜ್ಞಾನಿಕ ಬರಹಗಾರ, ಕಥೆಗಾರ ಹಾಗೂ ಕಾದಂಬರಿಕಾರರಾಗಿ ಕನ್ನಡ ಸಾಹಿತ್ಯದಲ್ಲಿ ವಿಶಿಷ್ಟ ಸ್ಥಾನ ಪಡೆದಿದ್ದಾರೆ. ಅವರು 'ಯಮಳಪ್ರಶ್ನೆ' ಎಂಬ ನಾಟಕವನ್ನು ರಚಿಸಿದ್ದರೂ, ಅವರ ಕಥನ ಸಾಹಿತ್ಯವೇ ಕನ್ನಡ ರಂಗಭೂಮಿಯಲ್ಲಿ ಅತ್ಯಂತ ಯಶಸ್ವಿಯಾಗಿ ರಂಗಪ್ರಯೋಗಗಳಿಗೆ ಒಳಗಾಗಿ ಜನಪ್ರಿಯತೆ ಪಡೆದಿದೆ. 'ತಬರನ ಕಥೆ', 'ಕಿರಗೂರಿನ ಗಯ್ಯಾಳಿಗಳು', 'ಕೃಷ್ಣೇಗೌಡನ ಆನೆ' ಹಾಗೂ 'ರಹಸ್ಯ ವಿಶ್ವ' ಕಥೆಗಳ ರಂಗರೂಪಗಳು ತೇಜಸ್ವಿಯವರ ಕಥನಶೈಲಿಯ ನಾಟಕೀಯ ಸಾಧ್ಯತೆಗಳನ್ನು ಸ್ಪಷ್ಟಪಡಿಸುತ್ತವೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಲೇಖನವು ತೇಜಸ್ವಿಯವರ ಆಯ್ದ ಕಥೆಗಳ ರಂಗರೂಪ ಪ್ರಕ್ರಿಯೆ, ನಿರ್ದೇಶಕರ ಸೃಜನಶೀಲತೆ ಹಾಗೂ ಕಥೆಯಿಂದ ರಂಗಕ್ಕೆ ರೂಪಾಂತರಗೊಂಡಾಗ ಉಂಟಾದ ಅರ್ಥವಿಸ್ತಾರ ಮತ್ತು ಮಿತಿಗಳನ್ನು ವಿಶ್ಲೇಷಿಸುತ್ತದೆ.

ಮುಖ್ಯ ಪದಗಳು: ತೇಜಸ್ವಿ, ರಂಗರೂಪ, ಕಥನ ಸಾಹಿತ್ಯ, ನಾಟಕ ಸಾಹಿತ್ಯ, ಕನ್ನಡ ರಂಗಭೂಮಿ.

1. ಪರಿಚಯ

ತೇಜಸ್ವಿಯವರ ಸಾಹಿತ್ಯದ ಕೇಂದ್ರಬಿಂದು ಕಥನವೇ ಆಗಿದ್ದು, ನಾಟಕ ರಚನೆ ಅವರ ಪ್ರಮುಖ ಸಾಹಿತ್ಯ ಪ್ರಕಾರವಾಗಲಿಲ್ಲ. ಆದರೂ ಅವರ ಕಥೆಗಳು ಪಾತ್ರಸೃಷ್ಟಿ, ಸಂವಾದ, ಸನ್ನಿವೇಶ ನಿರ್ಮಾಣ, ನಾಟಕೀಯತೆ ಹಾಗೂ ದೃಶ್ಯಾತ್ಮಕತೆಯ ಕಾರಣದಿಂದ ರಂಗಪ್ರಯೋಗಕ್ಕೆ ಪೂರಕವಾದ ಪಠ್ಯಗಳಾಗಿ ಪರಿಣಮಿಸಿದವು. ಈ ಸಾಧ್ಯತೆಯನ್ನು ಕನ್ನಡ ರಂಗಭೂಮಿಯೂ ಸಹ ಯಶಸ್ವಿಯಾಗಿ ಬಳಸಿಕೊಂಡಿರುವುದನ್ನು ನಾವು ಗಮನಿಸಬಹುದು.

2. ಯಮಳಪ್ರಶ್ನೆ: ತೇಜಸ್ವಿಯವರ ಏಕೈಕ ನಾಟಕ

ತೇಜಸ್ವಿಯವರ ಏಕೈಕ ನಾಟಕ 'ಯಮಳಪ್ರಶ್ನೆ' (೧೯೬೪). ಇದೊಂದು ಅಸಂಗತ ಮಾದರಿಯದು. ನವ್ಯ ಮಾರ್ಗದ ಮುಂಚೂಣಿಯಲ್ಲಿದ್ದಾಗ ಪ್ರಕಟವಾದದ್ದು. ಮಾರ್ಗಮಧ್ಯೆ ಕೆಟ್ಟು ನಿಂತ ಮೋಟಾರು ಬೈಕು ಮತ್ತು ತರುಣರಿಬ್ಬರ ಸಂವಾದದ ಸುತ್ತ ಸಾಗುವ ಈ ನಾಟಕ ಮುಕ್ತಾಯವಾಗುವಷ್ಟರಲ್ಲಿ ಜೀವನದ ಸಂಕೀರ್ಣತೆಯನ್ನು

Cover Page

INTERNATIONAL JOURNAL OF MULTIDISCIPLINARY EDUCATIONAL RESEARCH
ISSN:2277-7881(Print); IMPACT FACTOR :10.16(2026); IC VALUE:5.16; ISI VALUE:2.286
Peer-Peer Reviewed, Refereed & Open Access International Journal - As per UGC Norms
(Fulfilled Suggests Parameters of UGC by IJMER)
Volume:15, Issue:6(1), June 2026
Scopus Review ID: A2B96D3ACF3FEA2A
Article Received: Reviewed: Accepted
Publisher: Sucharitha Publication, India
Online Copy of Article Publication Available: www.ijmer.in

ಅಸಂಗತತೆಯನ್ನು ಬಿಂಬಿಸುವ ಹಲವು ಪ್ರಸಂಗಗಳು ಬಂದು ಹೋಗುತ್ತವೆ. ಇಲ್ಲಿನ ಮೋಟಾರು ಬೈಕು ಚಿಕಿತ್ಸೆಗೆ ಗುರಿಪಡಿಸಲಾಗದ ನಮ್ಮ ವ್ಯವಸ್ಥೆಯ ಸಂಕೇತವಾಗಿ, ತರುಣರ ನಡುವಿನ ಸಂವಾದವು ಏನನ್ನೂ ಸಾಧಿಸಲಾಗದ ವ್ಯರ್ಥ ಮಾತುಗಳಾಗಿ ಅರ್ಥರಾಹಿತ್ಯವಾಗಿ ಕಾಣುತ್ತವೆ. ಒಟ್ಟಿನಲ್ಲಿ, ಇಡೀ ಮಾನವನ ಬದುಕೇ 'ಉತ್ತರವಿಲ್ಲದ ಯಮಳ ಪ್ರಶ್ನೆ' ಇದ್ದಂತೆ ಎಂದು ತೋರುವುದು ಈ ನಾಟಕದ ಮುಖ್ಯ ಉದ್ದೇಶ.

ಅಸಂಗತ ನಾಟಕಗಳಲ್ಲಿ ಇದು ಅತ್ಯಂತ ಯಶಸ್ವಿ ನಾಟಕ. ಆದರೆ, ಆನಂತರದ ಸುಮಾರು ಐದು ದಶಕಗಳಲ್ಲಿ ತೇಜಸ್ವಿಯವರು ಪರಿಸರದ ಕಥೆಗಳು, ಕಾಡಿನ ಕಥೆಗಳು, ವಿಸ್ಮಯ ಜಗತ್ತು ಮಾಲಿಕೆ, ಮಿಲೆನಿಯಂ ಸರಣಿ, ಸಣ್ಣಕಥೆಗಳು, ಕಾದಂಬರಿಗಳು, ಅನುವಾದ, ಜೀವನ ಚರಿತ್ರೆ- ಹೀಗೆ ಹಲವು ಪ್ರಕಾರಗಳಲ್ಲಿ ಕೃತಿ ರಚನೆ ಮಾಡಿದರೂ ಯಮಳ ಪ್ರಶ್ನೆಯ ನಂತರ ನಾಟಕವನ್ನು ಬರೆಯಲೇ ಇಲ್ಲ ಎನ್ನುವುದು ತುಂಬಾ ಗಮನಾರ್ಹವಾದುದು.

3. ಕಥನ ಸಾಹಿತ್ಯದ ರಂಗರೂಪ

ನಾಟಕವೆನ್ನುವುದು ಸಾಹಿತ್ಯ ಹಾಗೂ ರಂಗಭೂಮಿಗಳನ್ನು ಗಮನದಲ್ಲಿಟ್ಟುಕೊಂಡು ಬಹಳ ಏಕಾಗ್ರತೆಯಲ್ಲಿ ಸೃಷ್ಟಿಯಾಗುವಂಥದ್ದು. ಇದು ಪ್ರತಿಭೆಯ ಕೇಂದ್ರೀಕರಣದ ಫಲವಾಗಿರುತ್ತದೆ. ವಿಭಿನ್ನ ಪಾತ್ರಗಳ ಸೃಷ್ಟಿ, ಘಟನಾವಳಿಗಳ ಸಂಘಟನೆ, ಕಥಾ ಸಂವಿಧಾನದಿಂದ ಘಟನೆಗಳು ಜಿಗಿದರೂ ರಂಗರೂಪವೆಂಬ ಬಂಧವೊಂದರಲ್ಲಿ ಅಳವಡುವ ರೀತಿ, ಸಾಹಿತ್ಯ ಮತ್ತು ರಂಗತಂತ್ರಗಳ ಸಮತೋಲನ- ಈ ಎಲ್ಲಾ ಅಂಶಗಳು ನಾಟಕ ರಚನೆಯಲ್ಲಿ ಮುಖ್ಯಪಾತ್ರವನ್ನು ವಹಿಸುತ್ತವೆ. ತೇಜಸ್ವಿಯವರ ಪ್ರತಿಭೆ ಸುಸಂಘಟಿತಗೊಳ್ಳದೆ ವಿಭಿನ್ನ ಕ್ಷೇತ್ರಗಳಲ್ಲಿ ಚೆಲ್ಲಾಪಿಲ್ಲಿಯಾಗಿದ್ದರಿಂದಲೋ, ಅಥವಾ ನಿರೂಪಣೆಯೇ ಅವರ ಕೃತಿಗಳ ಜೀವಾಳವಾಗಿದ್ದುದರಿಂದಲೋ ಏನೋ, ಒಟ್ಟಿನಲ್ಲಿ ತೇಜಸ್ವಿಯವರಿಗೆ 'ನಾಟಕ'ವೆನ್ನುವುದು ಅವರ ಸೃಜನಶೀಲತೆಯ ಮುಖ್ಯ ಸಾಹಿತ್ಯ ಪ್ರಕಾರವಾಗಲು ಸಾಧ್ಯವಾಗಲಿಲ್ಲ.

ಹೀಗಿದ್ದೂ, ರಂಗಭೂಮಿಗೆ ತೇಜಸ್ವಿಯವರು ಇಂದು ತುಂಬ ಹತ್ತಿರದವರಾಗಿರುವುದು ಅವರ ಸಾಹಿತ್ಯಕ ಕೃತಿಗಳ ರಂಗಪ್ರಯೋಗಗಳಿಂದ. ಇದು

INTERNATIONAL JOURNAL OF MULTIDISCIPLINARY EDUCATIONAL RESEARCH
ISSN:2277-7881(Print); IMPACT FACTOR :10.16(2026); IC VALUE:5.16; ISI VALUE:2.286
Peer-Peer Reviewed, Refereed & Open Access International Journal - As per UGC Norms
(Fulfilled Suggests Parameters of UGC by IJMER)
Volume:15, Issue:6(1), June 2026
Scopus Review ID: A2B96D3ACF3FEA2A
Article Received: Reviewed: Accepted
Publisher: Sucharitha Publication, India
Online Copy of Article Publication Available: www.ijmer.in

ಸಾಧ್ಯವಾದದ್ದು ರಂಗರೂಪಕಾರರ ಮತ್ತು ನಿರ್ದೇಶಕರ ಸೃಜನಶೀಲ ಪ್ರಯತ್ನಗಳಿಂದ ಎಂಬುದನ್ನು ನಾವು ಗಮನಿಸಬೇಕು. ರಂಗರೂಪ ಪ್ರಕ್ರಿಯೆಗೆ ಒಳಗಾಗಿರುವ ತೇಜಸ್ವಿಯವರ ಪ್ರಮುಖ ಕಥೆಗಳು 'ತಬರನ ಕಥೆ', 'ಕಿರಗೂರಿನ ಗಯ್ಯಾಳಿಗಳು', 'ಕೃಷ್ಣೇಗೌಡನ ಆನೆ' ಮತ್ತು 'ರಹಸ್ಯ ವಿಶ್ವ'.

3.1 ತಬರನ ಕಥೆ

ಅಧಿಕಾರಿ ವರ್ಗದ ವ್ಯವಸ್ಥೆಯ ಕ್ರೌರ್ಯಕ್ಕೆ ಸಿಲುಕಿ ದುರಂತವನ್ನು ತಲುಪುವ ವ್ಯಕ್ತಿಯ ಬದುಕನ್ನು ಚಿತ್ರಿಸುವ ಕಥೆ 'ತಬರನ ಕಥೆ'. ಇದನ್ನು ಮೊದಲು ರಂಗರೂಪಕ್ಕೆ ತಂದವರು ಆರ್.ನಾಗೇಶ್‌ರವರು, ಬೆನಕ ತಂಡಕ್ಕಾಗಿ. ಇದರ ಪ್ರಥಮ ಪ್ರಯೋಗವಾದದ್ದು ೧೯೮೫ ಜುಲೈ ೧೯ರಂದು. ಈ ರಂಗ ಪ್ರಯೋಗದ ಬಗ್ಗೆ ಡಾ. ವಿಜಯಾ ಅವರು ಹೀಗೆ ದಾಖಲಿಸುತ್ತಾರೆ:

ತಬರನ ಕಥೆ ನಮ್ಮ ಸಾಮಾಜಿಕ ಪರಿಸ್ಥಿತಿಯ ಹತಾಶ ವ್ಯಾಖ್ಯಾನ... ಹೇಳುವ ಬಗೆಯಲ್ಲಿ ತೀವ್ರತೆಯಲ್ಲಿ ಸಾಧಿಸಲಾಗಿದೆ. ಬಹುಮಟ್ಟಿಗೆ ಪ್ರಯೋಗದ ಎಲ್ಲ ಅಂಗಗಳನ್ನು ಶೈಲೀಕೃತಗೊಳಿಸಿ ತಬರನೊಬ್ಬನನ್ನು ವಾಸ್ತವಿಕ ನೆಲೆಗಳಲ್ಲಿ ರೂಪುಗೊಳಿಸಿರುವುದು ನಾಟಕದ ಮುಖ್ಯ ವೈದೃಶ್ಯವನ್ನು ಬಯಲುಗಿಡಲು ನೆರವಾಗಿದೆ. ತಬರನ ಜೀವನದ ವಿವಿಧ ಹಂತಗಳೇ ನಾಟಕದ ಘಟನೆಗಳ ಸರಣಿಯೂ ಆಗಿದ್ದು, ಪ್ರತಿಯೊಂದರಲ್ಲೂ ತಬರನೇ ಕೇಂದ್ರಲ್ಲಿರುತ್ತಾನೆ. ಹೀಗಾಗಿ ಇದು ಒಂದು ನೆಲೆಯಲ್ಲಿ ತಬರನ ಕತೆಯೂ ಹೌದು, ತಬರನ ಮೂಲಕ ಶೋಧಿಸಿದ ಸಮಾಜದ ಕತೆಯೂ ಹೌದು... (ಕೆ.ವಿ.ನಾರಾಯಣ ಅವರ ಮಾತುಗಳಿವು. ಗಮನಿಸಿ: ಆರ್.ನಾಗೇಶ್, ಪು.೫೨)

ಆರ್.ನಾಗೇಶ್‌ರವರ ನಿರ್ದೇಶನದಲ್ಲಿ ಅನೇಕ ಪ್ರಯೋಗಗಳನ್ನು ಕಂಡ ತಬರನ ಕಥೆ ರಂಗರೂಪವು ೧೯೮೬ರಲ್ಲಿ (ಪ್ರತಿಮಾ ನಾಟಕ ಪ್ರಕಾಶನದ ವತಿಯಿಂದ) ಪುಸ್ತಕ ರೂಪದಲ್ಲಿಯೂ ಪ್ರಕಟವಾಯಿತು. ತೇಜಸ್ವಿಯವರು ನಾಟಕ ರಚನೆ ಮಾಡದಿದ್ದರೂ ಅವರ ಕತೆ, ಕಾದಂಬರಿಗಳು ರಂಗರೂಪಕ್ಕೆ ಅಳವಡಲು ಹೇಳಿ ಮಾಡಿಸಿದಂತ ಕೃತಿಗಳಾಗಿ ಕಾಣುತ್ತವೆ ಎಂಬುದನ್ನು ತಬರನ ಕಥೆ ರಂಗಪ್ರಯೋಗದ ಅಸಂಖ್ಯ ಪ್ರದರ್ಶನಗಳು ಸಾಬೀತುಗೊಳಿಸಿವೆ. ೨೦೦೭ ಜನವರಿ ೭ರಂದು ತೇಜಸ್ವಿರವರ ಕಥನ ಸಾಹಿತ್ಯವನ್ನು

Cover Page

INTERNATIONAL JOURNAL OF MULTIDISCIPLINARY EDUCATIONAL RESEARCH
ISSN:2277-7881(Print); IMPACT FACTOR :10.16(2026); IC VALUE:5.16; ISI VALUE:2.286
Peer-Peer Reviewed, Refereed & Open Access International Journal - As per UGC Norms
(Fulfilled Suggests Parameters of UGC by IJMER)
Volume:15, Issue:6(1), June 2026
Scopus Review ID: A2B96D3ACF3FEA2A
Article Received: Reviewed: Accepted
Publisher: Sucharitha Publication, India
Online Copy of Article Publication Available: www.ijmer.in

ಕುರಿತು ರವೀಂದ್ರ ಕಲಾಕ್ಷೇತ್ರದ ಆವರಣದಲ್ಲಿ ಏರ್ಪಡಿಸಿದ್ದ ವಿಚಾರ ಸಂಕಿರಣದಲ್ಲಿ ಆರ್.ನಾಗೇಶ್‌ರವರು 'ರಂಗಸಾಧ್ಯತೆ, ನನ್ನ ಅನುಭವಗಳು' ಎಂಬ ವಿಷಯವನ್ನು ಕುರಿತು ಮಾತನಾಡುತ್ತಾ, ತೇಜಸ್ವಿಯವರ ಕೃತಿಗಳ ರಂಗರೂಪ ಪ್ರಕ್ರಿಯೆಗಳ ಬಗ್ಗೆ ಸಾಕಷ್ಟು ಒಳನೋಟಗಳನ್ನು ನೀಡಿರುತ್ತಾರೆ.

ತೇಜಸ್ವಿಯವರ 'ತಬರನ ಕಥೆ'ಯನ್ನು ಆರ್.ನಾಗೇಶ್‌ರವರಿಗಿಂತ ಭಿನ್ನವಾಗಿ ರಂಗಪ್ರಯೋಗಕ್ಕೆ ಅಳವಡಿಸಿದವರು ಹೆಗ್ಗೋಡಿನ 'ಜನಮನದಾಟ' ತಂಡದವರು. ಆರ್.ನಾಗೇಶ್‌ರವರ ನಿರ್ದೇಶನದ ರಂಗಪ್ರಯೋಗದಲ್ಲಿ 'ತಬರನ ಕಥೆ'ಯು ಪೂರ್ಣ ಪ್ರಮಾಣದ ನಾಟಕವಾದರೆ, 'ಜನಮನದಾಟ' ತಂಡದವರ ರಂಗ ಪ್ರಯೋಗದಲ್ಲಿ 'ತಬರನ ಕಥೆ'ಯು ದುರಂತದ ಛಾಯೆಯುಳ್ಳ ಒಂದು ಪ್ರಹಸನವಾಗಿದೆ. ತಮಾಷೆಯಾಗಿ ತಬರನ ಬದುಕನ್ನು ಕಟ್ಟಿಕೊಡುತ್ತಲೇ ದುರಂತದ ಅನುಭವವನ್ನು ಸ್ಪರ್ಶಿಸುವಂತೆ ಮಾಡುವ ಮಾದರಿಯ ರಂಗಪ್ರಯೋಗ ಇವರದು.

ಬ್ರಿಟಿಷರ ಆಳ್ವಿಕೆಯಲ್ಲಿ ಸುಂಕದ ಕಟ್ಟೆಯ ವಸೂಲಿ ಕೆಲಸಕ್ಕೆ ಸೇರಿಕೊಂಡ ತಬರ, ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಮತ್ತು ಆನಂತರದಲ್ಲಿ ಇಲಾಖೆಯಿಂದ ಇಲಾಖೆಗೆ ವರ್ಗವಾಗುತ್ತ, ಕೊನೆಗೆ ತನ್ನ ನಿವೃತ್ತಿಯ ವಯಸ್ಸಿಗೆ ಬರುವಷ್ಟರಲ್ಲಿ ಕಾಫಿ ಡಿಪೋ ಬಳಿ ಕಾಫಿ ಮೇಲೆ ಸುಂಕ ವಸೂಲಿ ಮಾಡುವ ಕೆಲಸವನ್ನು ಗಿಟ್ಟಿಸುತ್ತಾನೆ. (ಹೀಗೆ ಹಲವು ದಶಕಗಳ ಸೇವೆಯಲ್ಲಿ ಹಲವಾರು ಏರಿಳಿತಗಳನ್ನು ಕಂಡು ಕೊನೆಗೆ ಸುಂಕ ವಸೂಲಿ ಮಾಡುವ ಅದೇ ವೃತ್ತಿಗೆ ತಬರ ಬಂದು ತಲುಪುವುದು ಬಡ್ತಿಯನ್ನೇ ಪಡೆಯದ ಅವನ ದುಸ್ಥಿತಿಯನ್ನು ಹಾಗೂ ವ್ಯವಸ್ಥೆಯ ಹತಾಶೆಯನ್ನು ಸೂಚಿಸುತ್ತದೆ.) ತಬರನ ಬದುಕು ಹಾಸ್ಯಾಸ್ಪದಗೊಳ್ಳುತ್ತಾ ದುರಂತದೆಡೆಗೆ ಸಾಗುವುದು ಇಲ್ಲಿಂದಲೇ.

ಕಾಯಿಲೆಯಿಂದ ಸೊರಗಿಹೋಗಿದ್ದ ತನ್ನ ಹೆಂಡತಿ 'ಅಪ್ಪಿ'ಯನ್ನು ತಬರ ಡಾಕ್ಟರ್ ಸಿಲ್ವರವರ ಹತ್ತಿರ ಕರೆದೊಯ್ದಾಗ 'ಇದೇನಯ್ಯ, ಬರೇ ಶ್ರೀಮಂತರಿಗೆ ಬರುವ ರೋಗ ಇದು. ರಾಜರೋಗ. ನಮ್ಮ ಕಾಲದಲ್ಲಿ ಒಂದೆರಡು ಜನ ಪರಂಗಿ ದೊರೆಗಳಿಗೆ ಬಂದಿತ್ತು ನೋಡು. ನಿನ್ನ ಹೆಂಡತಿಗೆ ಯಾಕೆ ಬಂತು ಇದು? ನಿನಗೂ ಶ್ರೀಮಂತನಾಗುವ ಯೋಗ ಇರಬಹುದೋ' ಎಂದು ಅವರು ತಮಾಷೆ ಮಾಡಿದಾಗ ತಬರನಿಗೆ ಸಂತೋಷವೇ ಆಗುತ್ತದೆ. ತಬರ ತನ್ನ ಹೆಂಡತಿಗೆ 'ನೋಡೇ ನಿನಗೆ ರಾಜರಿಗೆ, ರಾಣಿಯರಿಗೆ ಬರುವ ರೋಗ ಬಂದಿದೆಯಂತೆ. ಪರಂಗಿಯೋರ ಪಟ್ಟ ಸಿಕ್ಕದಿದ್ದರೂ ಅವರಿಗೆ ಬರೋ ಕಾಯಿಲೆನಾದ್ರೂ

Cover Page

INTERNATIONAL JOURNAL OF MULTIDISCIPLINARY EDUCATIONAL RESEARCH
ISSN:2277-7881(Print); IMPACT FACTOR :10.16(2026); IC VALUE:5.16; ISI VALUE:2.286
Peer-Peer Reviewed, Refereed & Open Access International Journal - As per UGC Norms
(Fulfilled Suggests Parameters of UGC by IJMER)
Volume:15, Issue:6(1), June 2026
Scopus Review ID: A2B96D3ACF3FEA2A
Article Received: Reviewed: Accepted
Publisher: Sucharitha Publication, India
Online Copy of Article Publication Available: www.ijmer.in

ಬಂತಲ್ಲ ಅದೇ ಸಂತೋಷ' ಎನ್ನುತ್ತಾನೆ. ಸರ್ಕಾರಿ ನೌಕರನಾದ ತನಗೆ ಸಾವಿರಾರು ರೂಪಾಯಿ 'ಪ್ರಾವಿಡೆಂಟ್ ಫಂಡ್' ಬರುತ್ತದೆಂಬ ವಿಷಯ ತಿಳಿದಾಗಲಂತೂ ತನ್ನ ಹೆಂಡತಿಗೆ ಬಂದಿರುವುದು ರಾಜ ರೋಗವೇ ಇರಬೇಕು; ಬೇಗ ಹಣ ಬಂದರೆ ಒಳ್ಳೆ ಔಷಧಿ ಕೊಟ್ಟು ಹೆಂಡತಿಯ ಖಾಯಿಲೆಯನ್ನಾದರೂ ವಾಸಿ ಮಾಡಬಹುದೆಂಬ ಆಸೆ ಮಿನುಗತೊಡಗುತ್ತದೆ.

ಆದರೆ ಸರ್ಕಾರಿ ನೌಕರನಾಗಿ ವ್ಯವಸ್ಥೆಯ ಒಂದು ಭಾಗವೇ ಆಗಿದ್ದ, ಮತ್ತು ತನ್ನ ಹೆಂಡತಿಯನ್ನು ಬಹಳ ಪ್ರೀತಿಸುತ್ತಿದ್ದ ತಬರನಿಗೆ 'ವ್ಯವಸ್ಥೆಯ ಭಾಷೆ' ಮತ್ತು 'ಹೆಂಡತಿಯ ಖಾಯಿಲೆ'ಗಳು ಅರ್ಥವಾಗದ ಸಂಗತಿಗಳಾಗಿ ಕಾಣುವುದು ನಿಜಕ್ಕೂ ಒಂದು ದುರಂತ ವ್ಯಂಗ್ಯವೇ ಸರಿ. ಫೈಲುಗಳ ನಡುವೆ ಹುದುಗಿ ಹೋಗುವ ವ್ಯವಸ್ಥೆಯೊಳಗಿನ ತಬರನು ತನ್ನನ್ನು ಸುತ್ತುವರೆದಿರುವ ವ್ಯವಸ್ಥೆಯನ್ನು ಮೊದಮೊದಲು ತುಂಬಾ ಸಲುಗೆಯಿಂದ ಕಾಣುತ್ತಿರುತ್ತಾನೆ. (ಅಲ್ಲದೆ, ಅವಕಾಶ ಸಿಕ್ಕಿದಾಗಲೆಲ್ಲಾ ಬ್ರಿಟಿಷರ ಆಳ್ವಿಕೆಯನ್ನು ಹೊಗಳುತ್ತಿರುತ್ತಾನೆ.) ಈತ ತನ್ನ ಹೆಂಡತಿ 'ಅಪ್ಪಿ'ಯನ್ನು ತುಂಬಾ ಪ್ರೀತಿಸುವುದೂ ಕೂಡ ಪರಂಗಿ ದೊರೆಗಳಿಗೆ ಬರುತ್ತಿದ್ದ ಖಾಯಿಲೆ ಆಕೆಗೆ ಬಂದಿದೆ ಎನ್ನುವ ಕಾರಣಕ್ಕಾಗಿಯೇ. ಹೀಗೆ ತಾನು ಪ್ರೀತಿಸುತ್ತಿದ್ದ ವ್ಯವಸ್ಥೆಗೆ ಹಾಗೂ ಹೆಂಡತಿ 'ಅಪ್ಪಿ'ಗೆ ಹಿಡಿದ ಖಾಯಿಲೆಗಳು ವಾಸಿಯಾಗದ ರೋಗಗಳಂತೆ ಉಲ್ಬಣಿಸಿದಾಗಲೇ ತಬರನಿಗೆ ಬದುಕಿನ ಕ್ರೌರ್ಯವೆಂಥದ್ದು ಮತ್ತು ಈಗ ತಾನು ಎಲ್ಲಿದ್ದೇನೆ ಎಂದು ತಿಳಿಯುವುದು. ತಬರನ ಪ್ರಾವಿಡೆಂಟ್ ಫಂಡ್‌ನ ಫೈಲು 'ಬಿಲ್ಡ್‌ಅಪ್' ಆಗತೊಡಗಿ ಮೇಲಿನಿಂದ ಕೆಳಕ್ಕೂ, ಕೆಳಗಿನಿಂದ ಮೇಲಕ್ಕೂ ಓಡಾಡುತ್ತಿದ್ದಂತೆ ಅನೇಕ ದಿನಗಳು ಕಳೆಯುತ್ತವೆ. ಮತ್ತೊಂದು ಕಡೆ, ಅಪ್ಪಿಯ ಖಾಯಿಲೆ ವಿಪರೀತಕ್ಕೆ ತಲುಪುತ್ತದೆ. ಹೆಂಡತಿಯನ್ನು ಬದುಕಿಸುವ ಆಸೆಯೂ ಹಣ ದೊರೆಯುವ ಆಸೆಯೊಡನೆಯೇ ಕರಗಿ ಹೋಗುತ್ತಿರುತ್ತದೆ. "ತಬರನಿಗೆ ಮಾನವರನ್ನು, ಪೊಲೀಸು, ಆಫೀಸು, ಶ್ಯಾನುಭೋಗ, ಪಟೇಲ, ಜವಾನ ಮುಂತಾಗಿ ಪರಿವರ್ತಿಸುತ್ತ ಎಂಥೆಂಥದೋ ಗೀಚಿದ ಫೈಲುಗಳನ್ನು ಅಂತರಾತ್ಮನಂತೆ ಸಂರಕ್ಷಿಸುತ್ತಾ ಇರುವ ಒಂದು ನಿರ್ದಯ ಅರ್ಥಹೀನ ವ್ಯೂಹದ ಅರಿವು ನಿಧಾನವಾಗಿ ಆಗತೊಡಗಿತು..." (ಕೆ.ಪಿ.ಪೂರ್ಣಚಂದ್ರ ತೇಜಸ್ವಿಯವರ ಎಲ್ಲ ಕತೆಗಳು, ಪು.೨೮೭)

ಆದರೆ, ಈ ಲೋಕವೆಂಬುದು ರೌರವ ನರಕವೆಂಬ ಸತ್ಯದ ಅರಿವಾಗುವಷ್ಟರಲ್ಲಿ ತಬರನು ಹೆಂಡತಿಯನ್ನು ಕಳೆದುಕೊಂಡು ಹುಚ್ಚನಾಗಿರುತ್ತಾನೆ. ಒಂದು ಕಡೆ

Cover Page

INTERNATIONAL JOURNAL OF MULTIDISCIPLINARY EDUCATIONAL RESEARCH
ISSN:2277-7881(Print); IMPACT FACTOR :10.16(2026); IC VALUE:5.16; ISI VALUE:2.286
Peer-Peer Reviewed, Refereed & Open Access International Journal - As per UGC Norms
(Fulfilled Suggests Parameters of UGC by IJMER)
Volume:15, Issue:6(1), June 2026
Scopus Review ID: A2B96D3ACF3FEA2A
Article Received: Reviewed: Accepted
Publisher: Sucharitha Publication, India
Online Copy of Article Publication Available: www.ijmer.in

ಸ್ವಾತಂತ್ರ್ಯೋದಯದ ಬೆಳ್ಳಿಹಬ್ಬದ ಪ್ರಯುಕ್ತ ಭಾರತದ ಸ್ವಾತಂತ್ರ್ಯವನ್ನು ಹೊಗಳಿ ಎಲ್ಲರೂ ಭಾಷಣ ಮಾಡುತ್ತಿದ್ದರೆ, ತಬರ ಮಾತ್ರ ಬ್ರಿಟಿಷರ ಆಳ್ವಿಕೆಯನ್ನು ಹೊಗಳುತ್ತಿರುತ್ತಾನೆ.

ಇಂತಹ ಹಂದರವುಳ್ಳ ತಬರನ ಕಥೆಯನ್ನು ಜನಮನದಾಟದವರು ಹೆಚ್ಚಿನ ರಂಗಪರಿಕರಗಳ ಬಳಕೆಯಿಲ್ಲದೆ ರಂಗಪ್ರಯೋಗಕ್ಕೆ ಒಳಪಡಿಸಿ ರಾಜ್ಯಾದ್ಯಂತ ಪ್ರದರ್ಶನಗೊಳಿಸಿದ್ದಾರೆ. ನಿರೂಪಣೆಯನ್ನು ಪಾತ್ರಗಳೇ ನಿರ್ವಹಿಸುವ ಕ್ರಮ ಮತ್ತು ಒಂದೇ ಪಾತ್ರವು ಅಭಿನಯದ ಸೂಕ್ಷ್ಮತೆಯನ್ನು ಬಳಸಿಕೊಂಡು ಹಲವು ಪಾತ್ರಗಳನ್ನು ನಿರ್ವಹಿಸುವ ತಂತ್ರ- ಇವರ ಪ್ರಯೋಗದಲ್ಲಿ ಎದ್ದು ಕಾಣುವ ಅಂಶವಾಗಿದೆ.

3.2 ರಹಸ್ಯ ವಿಶ್ವ

ತಬರನ ಕಥೆಯ ಜೊತೆ ಜೊತೆಗೆಯೇ ಜನಮನದಾಟದವರು ಪ್ರದರ್ಶಿಸಿದ ಇನ್ನೊಂದು ನಾಟಕ 'ರಹಸ್ಯ ವಿಶ್ವ' ಕಥೆಯನ್ನು ಆಧರಿಸಿದ್ದು. ರಹಸ್ಯ ವಿಶ್ವ ಕಥೆ ಎಷ್ಟು ತಮಾಷೆಯದ್ದೋ ಅಷ್ಟೇ ಗಂಭೀರವಾದದ್ದು. ಅಚ್ಚರಿಯ ವಿಸ್ಮಯ ಜಗತ್ತುಗಳನ್ನು ಅನಾವರಣಗೊಳಿಸುವಂಥದ್ದು. ತೇಜಸ್ವಿಯವರ ಕಥೆಯಲ್ಲಿ ಸೈಕಲ್ ಕಲಿಯಲು ಯತ್ನಿಸುವ ಹುಡುಗನ ಮೂಲಕ ಕಥೆಯು ನಿರೂಪಣೆಯಾಗುತ್ತಾ ಸಾಗುತ್ತದೆ. ಈ ಹುಡುಗನ ಪಾಲಿಗೆ ಕಾಲಗತಿಯಲ್ಲಿ ಸ್ವಲ್ಪವೂ ಮೂಲದ ಗುರುತಿಲ್ಲದೆ ಬದಲಾದ ಶಿವಮೊಗ್ಗೆ, ಅಲ್ಲಿ ರಜಾ ದಿನಗಳನ್ನು ಕಳೆಯುತ್ತಿದ್ದ ಬಾಲ್ಯದ ಬದುಕು, ಆ ಸಂದರ್ಭದಲ್ಲಿ ತನಗೆ ಸೈಕಲ್ ಕಲಿಸಲು ಬಂದ ಪುರುಷೋತ್ತಮ ಮತ್ತು ಪ್ರಫುಲ್ಲರ ಸ್ವಭಾವ, ಸೈಕಲ್ಲನ್ನು ಬ್ಯಾಲೆನ್ಸ್ ಮಾಡುವ ತಂತ್ರ, ಮಲೆನಾಡಿನ ಆ ಕೊರಕಲು ದಾರಿ, ಸುತ್ತ ಮುತ್ತಲಿನ ಪರಿಸರ, ಸ್ವಂತ ಬುದ್ಧಿಯಿದ್ದಂತೆ ವರ್ತಿಸುತ್ತಿದ್ದ ಸೈಕಲ್ಲು, ರಂಗಮ್ಮನ ಬೈಗುಳಗಳು, ಸಂದರ್ಭ ಸನ್ನಿವೇಶಕ್ಕೆ ತಕ್ಕಂತೆ ಬದಲಾಗುವ ರಂಗಮ್ಮನ ವ್ಯಕ್ತಿತ್ವ ಮತ್ತು ಸ್ಥೂಲ ಕಾಯದ ಆ ದುಷ್ಟ ಹೆಂಗಸನ್ನು ಹಿಂದಿನಿಂದ 'ಸೂಳೆ' ಎಂದು ಕರೆಯುತ್ತಾ ಹತ್ತಿರ ಬಂದಾಗ ಎಲೆ ಅಡಿಕೆ ಕೊಟ್ಟು ಸಲುಗೆಯಿಂದ ಮಾತನಾಡುವ ಅಜ್ಜಿಯ ವ್ಯಕ್ತಿತ್ವ- ಇವೆಲ್ಲವೂ ಮುಗ್ಧ ಹುಡುಗನ ಪಾಲಿಗೆ ವಿಚಿತ್ರ ರಹಸ್ಯ ವಿಶ್ವಗಳಂತೆ ಕಾಣತೊಡಗುತ್ತವೆ.

ಕಥೆಯಲ್ಲಿನ ಘಟನಾವಳಿಗಳ ನಿರೂಪಣೆಯಲ್ಲಿ ನಗೆಯ ಹೊನಲೇ ಹರಿಯುತ್ತಿದ್ದರೂ ಎಲ್ಲಿಯೂ 'ರಹಸ್ಯ ವಿಶ್ವ'ವೆನ್ನುವುದು ವಾಚ್ಯವಾಗಿ ಕಾಣಿಸುವುದಿಲ್ಲ.

Cover Page
INTERNATIONAL JOURNAL OF MULTIDISCIPLINARY EDUCATIONAL RESEARCH
ISSN:2277-7881(Print); IMPACT FACTOR :10.16(2026); IC VALUE:5.16; ISI VALUE:2.286
Peer-Peer Reviewed, Refereed & Open Access International Journal - As per UGC Norms
(Fulfilled Suggests Parameters of UGC by IJMER)
Volume:15, Issue:6(1), June 2026
Scopus Review ID: A2B96D3ACF3FEA2A
Article Received: Reviewed: Accepted
Publisher: Sucharitha Publication, India
Online Copy of Article Publication Available: www.ijmer.in

ತೇಜಸ್ವಿಯವರ ಈ ಕಥೆಯು ನೀಡುವ ಈ ವಿಭಿನ್ನ ರಹಸ್ಯ ವಿಶ್ವಗಳ ದರ್ಶನವನ್ನು ಜನಮನದಾಟದವರ ರಂಗಪ್ರಯೋಗವು ತೋರಲು ಸಾಧ್ಯವಾಗಲಿಲ್ಲ ಎನ್ನಬಹುದು. ಜನಮನದಾಟದವರ ರಂಗಪ್ರಯೋಗದಲ್ಲಿ ಹಲವು ಪಾತ್ರಗಳ ಮೂಲಕ ಕಥೆಯು ನಿರೂಪಣೆಯಾಗುತ್ತಾ ಸಾಗುತ್ತದೆಯಾದರೂ ಕಥೆಯಲ್ಲಿ ಲೇಖಕರು ಹೇಳಬಯಸುವ ಎಲ್ಲ ಬಗೆಯ ರಹಸ್ಯ ಜಗತ್ತುಗಳು ಅನಾವರಣಗೊಳ್ಳುವುದಿಲ್ಲ. ರಂಗಮ್ಮನ ಪ್ರಸಂಗವೇ ಇಲ್ಲಿ ಕೇಂದ್ರವೆನ್ನಿಸಿಕೊಂಡು 'ರಹಸ್ಯ ವಿಶ್ವ'ದ ಉಳಿದ ಆಯಾಮಗಳು ಮರೆಯಾಗಿಬಿಡುತ್ತವೆ. ಕಥೆಯಲ್ಲಿ 'ರಂಗಮ್ಮನು ಸೂಳೆಯಂತೆ' ಅನ್ನುವುದು ಕೇವಲ ನಿರೂಪಕನ ಮನೆಯವರ ಹೇಳಿಕೆಯಷ್ಟೆ. ಆದರೆ, ರಂಗರೂಪದಲ್ಲಿ ಈ ಪಾತ್ರವನ್ನು ನಿಜವಾಗಿಯೂ ಸೂಳೆಯಂತೆ ತೋರಲು ಯತ್ನಿಸಲಾಗಿದೆ. ರಂಗಮ್ಮನ ಸ್ಥೂಲ ದೇಹ, ಅವಳ ನರ್ತನ, ಸೀರೆಯ ಸುರುಳಿ, ಅಶ್ಲೀಲ ಬೈಗುಳಗಳು, ಹೊಡೆತಗಳೇ ಮುಖ್ಯವಾಗಿ- ಮುಗ್ಧ ಹುಡುಗನ ಪಾಲಿಗೆ- ಇದೇ 'ರಹಸ್ಯ ವಿಶ್ವ' ಎಂಬಂತೆ ರಂಗರೂಪವು ಸಾಧಿಸಲು ಪ್ರಯತ್ನಿಸುತ್ತದೆ.

ಈ ಕಾರಣಕ್ಕಾಗಿಯೇ ಜನಮನದಾಟದವರ 'ತಬರನ ಕಥೆ'ಯ ರಂಗರೂಪದಲ್ಲಿನ ಪಕ್ವತೆಯನ್ನು 'ರಹಸ್ಯ ವಿಶ್ವ' ಕಥೆಯ ರಂಗಪ್ರಯೋಗದಲ್ಲಿ ಕಾಣಲು ಸಾಧ್ಯವಾಗುವುದಿಲ್ಲ. ರಹಸ್ಯ ವಿಶ್ವದ ರಂಗಪ್ರಯೋಗವು ಪ್ರೇಕ್ಷಕರನ್ನು ರಂಜಿಸುತ್ತದಾದರೂ (ತಬರನ ಕಥೆಯ ಪ್ರಯೋಗದಂತೆ ಅಥವಾ ತೇಜಸ್ವಿಯವರ ರಹಸ್ಯ ವಿಶ್ವ ಕಥೆಯ ಓದಿನಂತೆ) ಯಾವುದೇ ಬಗೆಯ ಗಾಢ ಅನುಭವವನ್ನು ಪ್ರೇಕ್ಷಕರಿಗೆ ನೀಡುವಲ್ಲಿ ವಿಫಲವಾಗುತ್ತದೆ.

ಜನಮನದಾಟ ತಂಡದವರ 'ರಹಸ್ಯ ವಿಶ್ವ' ಮತ್ತು 'ತಬರನ ಕಥೆ'ಗಳ ರಂಗ ಪ್ರಯೋಗಗಳ ರಂಗರೂಪ ಪರಿಕಲ್ಪನೆ, ನಿರ್ದೇಶನ, ಸಂಗೀತ, ವಿನ್ಯಾಸ: ಇಡೀ ತಂಡದ್ದು- ಎಂಬುದು ಅವರ ಹೇಳಿಕೆ. ಇದೇ ತಂಡವು ಶ್ರೀನಿವಾಸ ವೈದ್ಯರ 'ಶ್ರದ್ಧಾ ಮತ್ತು ಹಣತೆ', ಲಕ್ಷ್ಮಣ ಗಾಯಕವಾಡರ ಆತ್ಮಕಥೆ 'ಉಚಲ್ಯಾ' ಎಂಬ ಕೃತಿಗಳನ್ನು ರಂಗ ಪ್ರಯೋಗಗಳಿಗೆ ಒಳಪಡಿಸುವಲ್ಲಿ ಸಾಕಷ್ಟು ಯಶಸ್ವಿಯಾಗಿದೆ.

3.3 ಕಿರಗೂರಿನ ಗಯ್ಯಾಳಿಗಳು

೧೯೯೧ರಲ್ಲಿ ಪ್ರಕಟವಾದ ತೇಜಸ್ವಿಯವರ ಕಿರಗೂರಿನ ಗಯ್ಯಾಳಿಗಳು ಎಂಬ ಕಥಾ ಸಂಕಲನವು 'ಕಿರಗೂರಿನ ಗಯ್ಯಾಳಿಗಳು', 'ಕೃಷ್ಣೇಗೌಡನ ಆನೆ', 'ಮಾಯಾ ಮೃಗ' ಮತ್ತು


Cover Page

INTERNATIONAL JOURNAL OF MULTIDISCIPLINARY EDUCATIONAL RESEARCH
ISSN:2277-7881(Print); IMPACT FACTOR :10.16(2026); IC VALUE:5.16; ISI VALUE:2.286
Peer-Peer Reviewed, Refereed & Open Access International Journal - As per UGC Norms
(Fulfilled Suggests Parameters of UGC by IJMER)
Volume:15, Issue:6(1), June 2026
Scopus Review ID: A2B96D3ACF3FEA2A
Article Received: Reviewed: Accepted
Publisher: Sucharitha Publication, India
Online Copy of Article Publication Available: www.ijmer.in

‘ರಹಸ್ಯವಿಶ್ವ’ ಎಂಬ ನಾಲ್ಕು ಕಥೆಗಳ ಸಂಗ್ರಹ. ಈ ನಾಲ್ಕು ಕಥೆಗಳಲ್ಲಿ ‘ಮಾಯಾಮೃಗ’ವು ಆ ಅವಧಿಯಲ್ಲಿ ಪ್ರಕಟವಾದ ರಾಷ್ಟ್ರದ ಅತ್ಯುತ್ತಮ ಹದಿಮೂರು ಕಥೆಗಳಲ್ಲಿ ಒಂದೆಂದು ದೆಹಲಿಯ ‘ಕಥಾ’ ಪ್ರಶಸ್ತಿ ಪಡೆದಿದ್ದರೆ, ಉಳಿದ ಮೂರು ಕಥೆಗಳು ನಾಟಕಗಳಾಗಿ ತುಂಬಾ ಜನಪ್ರಿಯತೆಯನ್ನು ಪಡೆದಿವೆ. (ಇವುಗಳಲ್ಲಿ ‘ರಹಸ್ಯ ವಿಶ್ವ’ ಕಥೆಯ ರಂಗಪ್ರಯೋಗದ ಬಗ್ಗೆ ಈಗಾಗಲೇ ಚರ್ಚಿಸಲಾಗಿದೆ.)

ಮೊದಲನೆಯ ಕಥೆಯಾದ ‘ಕಿರಗೂರಿನ ಗಯ್ಯಾಳಿಗಳು’ ಸ್ತ್ರೀವಾದಿಗಳಿಂದ ತುಂಬ ಪ್ರಶಂಸೆ ಪಡೆದಿದೆ. ‘ತಮ್ಮ ಆತ್ಮಗೌರವಕ್ಕಾಗಿ ಅವಿರತ ಹೋರಾಡುತ್ತಿರುವ ಎಲ್ಲ ಮಹಿಳೆಯರಿಗೆ’ ಎಂದು ತೇಜಸ್ವಿಯವರು ಈ ಕೃತಿಯನ್ನು ಅರ್ಪಿಸುತ್ತಾರಾದರೂ, ತಾವು ಕೃತಿ ರಚನೆಯ ಸಂದರ್ಭದಲ್ಲಿ ಅಂತಹ ಯಾವುದೇ ಸ್ತ್ರೀವಾದಿ ತಾತ್ವಿಕತೆಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಬರೆಯಲಿಲ್ಲವೆಂದು ಹೇಳುತ್ತಾರೆ. ಆದರೂ ಸ್ತ್ರೀವಾದಿ ಚಳುವಳಿಯು ತೀವ್ರ ಚರ್ಚೆಗೊಳಗಾಗಿ, ತುಂಬ ಉಚ್ಛ್ರಾಯ ಸ್ಥಿತಿಯಲ್ಲಿದ್ದ ತೊಂಬತ್ತರ ದಶಕದಲ್ಲಿ ಈ ಕಥೆ ಸಾಕಷ್ಟು ಜನಪ್ರಿಯತೆಯನ್ನು ಪಡೆದು ಹಿಂದಿ, ಇಂಗ್ಲಿಷ್, ಮಲಯಾಳಂ ಭಾಷೆಗಳಿಗೆ ಅನುವಾದವಾಯಿತು. ಎಲ್ಲಕ್ಕಿಂತ ಮುಖ್ಯವಾಗಿ ಎ.ಎನ್.ರಾವ್ ಜಾದವರ್‌ರಿಂದ ರಂಗಪ್ರಯೋಗಕ್ಕೆ ಒಳಪಟ್ಟು ನಾಟಕವಾಗಿ ಇನ್ನಷ್ಟು ಜನಪ್ರಿಯತೆಯನ್ನು ಸಾಧಿಸಿತು. ೯೦ರ ದಶಕದಿಂದ ಅಸಂಖ್ಯ ಪ್ರಯೋಗಗಳನ್ನು ಕಂಡಿರುವ ಎ.ಎನ್.ರಾವ್ ಜಾದವ್‌ರವರ ‘ಕಿರಗೂರಿನ ಗಯ್ಯಾಳಿಗಳು’ ರಂಗರೂಪವು ನವಕರ್ನಾಟಕ ಪ್ರಕಾಶನದಿಂದ ಪುಸ್ತಕರೂಪದಲ್ಲಿಯೂ ಪ್ರಕಟವಾಗಿದೆ (೧೯೯೯).

ಮೂರು ಹಗಲು ಮೂರು ರಾತ್ರಿ ಎಡಬಿಡದೆ ಬೀಸುವ ಬಿರುಗಾಳಿಯು ಅಂತಿಮವಾಗಿ ನಾನಾ ಆವಾಂತರಗಳನ್ನು ಸೃಷ್ಟಿಸಿ ಕಿರಗೂರಿನ ಗಯ್ಯಾಳಿಯರ ಪುರುಷರ ವಿರುದ್ಧದ ಹೋರಾಟಕ್ಕೆ ಕಾರಣವಾಗುವುದು ಈ ಕಥೆಯ ಕೇಂದ್ರ ವಸ್ತು. ಬಿರುಗಾಳಿಯು ಮತ್ತು ಕಿರಗೂರಿನ ಗಯ್ಯಾಳಿಯರ ಕ್ರಾಂತಿಯು ಎರಡೂ ಒಂದೇ ಏನೋ ಎನ್ನುವಂತೆ ಆರಂಭಗೊಂಡು ಪುರುಷ ಪ್ರಧಾನ ಸಮಾಜಕ್ಕೆ ಸಂಕೇತವೆಂಬಂತೆ ಶತಮಾನಗಳಿಂದ ಬೆಳೆದು ನಿಂತಿದ್ದ ಬೃಹದಾಕಾರವಾದ ಹೆಬ್ಬಲಸಿನ ಮರವನ್ನು ಉರುಳಿಸುತ್ತವೆ. ಹೀಗೆ ಪುರುಷ ಪ್ರಧಾನ ಸಮಾಜದ ಸಂಕೇತವೆಂಬಂತಿದ್ದ ಹೆಬ್ಬಲಸಿನ ಮರ ಉರುಳಿದಾಗಲೇ ತಮ್ಮ ಗಂಡಂದಿರ ದೌರ್ಬಲ್ಯವೆಂಥದ್ದು, ಅವರ ದೆಸೆಯಿಂದ ತಾವು ಹೇಗೆಲ್ಲಾ ಶೋಷಣೆಗೊಳಗಾಗುತ್ತಿದ್ದೇವೆ ಮತ್ತು ಸ್ತ್ರೀಯರಾದ ತಮ್ಮ ಶಕ್ತಿಯೆಂಥದ್ದು ಎನ್ನುವುದರ ಅರಿವು ಕಿರಗೂರಿನ ಹೆಣ್ಣುಮಕ್ಕಳಿಗಾಗುವುದು. ಪುರುಷ ಪ್ರಧಾನ ಸಮಾಜ ರೂಪಿಸಿದ

Cover Page

INTERNATIONAL JOURNAL OF MULTIDISCIPLINARY EDUCATIONAL RESEARCH
ISSN:2277-7881(Print); IMPACT FACTOR :10.16(2026); IC VALUE:5.16; ISI VALUE:2.286
Peer-Peer Reviewed, Refereed & Open Access International Journal - As per UGC Norms
(Fulfilled Suggests Parameters of UGC by IJMER)
Volume:15, Issue:6(1), June 2026
Scopus Review ID: A2B96D3ACF3FEA2A
Article Received: Reviewed: Accepted
Publisher: Sucharitha Publication, India
Online Copy of Article Publication Available: www.ijmer.in

ಕಾನೂನು ಸಂಪ್ರದಾಯಗಳ ಇಕ್ಕಟ್ಟಿನಲ್ಲಿ ತಾವು ವೃಥಾ ಸಿಕ್ಕಿ ನರಳುತ್ತಿದ್ದೇವೆ ಎನ್ನುವ ಸಂಗತಿ ಅರಿವಾಗಿ ಕಿರಗೂರಿನ ಹೆಣ್ಣು ಮಕ್ಕಳೆಲ್ಲ ದಾನಮ್ಮನ ನೇತೃತ್ವದಲ್ಲಿ ಒಂದುಗೂಡಿ ಪಂಚಾಯತಿ ವಿಚಾರಣೆಯ ಸಂದರ್ಭದಲ್ಲಿ ನಡೆಸುವ ಹಿಂಸಾತ್ಮಕ ದಾಳಿಯೇ ಆನಂತರದಲ್ಲಿ ಮದ್ಯಪಾನ ವಿರೋಧೀ ಚಳುವಳಿಯಾಗಿ ರೈತ ಚಳುವಳಿಗೂ ಹೇಗೆ ಕಾರಣವಾಯಿತು ಎಂಬ ಸಂಗತಿ ತಿಳಿದು ಬರುತ್ತದೆ.

ಇಂತಹ ಸರಳ ಸಾಂಕೇತಿಕ ಕಥೆಯನ್ನು ರಂಗರೂಪಕ್ಕೆ ಅಳವಡಿಸಿ, ನಿರ್ದೇಶಿಸಿ ರಂಗಪ್ರಯೋಗ ಮಾಡುವುದು ಸ್ವಲ್ಪ ಕಷ್ಟಸಾಧ್ಯವೇ ಸರಿ. ಕಥೆಯಲ್ಲಿನ ಹೆಬ್ಬಲಸಿನ ಮರದ ದಿಮ್ಮಿ ಉರುಳಿಕೊಂಡು ಹೋಗುವ ಪ್ರಸಂಗವನ್ನು ರಂಗದ ಮೇಲೆ ತರುವುದಂತೂ ಇನ್ನಷ್ಟು ಕಷ್ಟ. ಬತ್ತದ ಗದ್ದೆಯಲ್ಲಿ ಕಳೆಕೀಳುತ್ತಿದ್ದ ಹೆಂಗಸರ ನಡುವೆ ಶುರುವಾಗುವ ಜಗಳದಿಂದ ಹಿಡಿದು, ನಂಬೂದಿರಿ ಪಂಡಿತನ ಹಿಂದೆ ಓಡಿ ಹೋಗಿದ್ದ ನಾಗಮ್ಮನನ್ನು ಪಂಚಾಯ್ತಿ ಸೇರಿಸಿ ವಿಚಾರಣೆ ನಡೆಸುವ ಸಂದರ್ಭದಲ್ಲಿನ ಬಯ್ಗುಳಗಳವರೆಗೂ ಕಥೆಯೊಳಗೆ ತುಂಬ ಸಹಜವೆನ್ನುವಂತೆ ಬಯ್ಗುಳಗಳ ಸರಮಾಲೆಯೇ ಎದುರಾಗುತ್ತದೆ. ಅಲ್ಲದೆ ಕಥೆಯ ಉದ್ದಕ್ಕೂ ಇರುವ ನಗೆ ಉಕ್ಕಿಸುವ ತಮಾಷೆಯ ಪ್ರಸಂಗಗಳನ್ನು ರಂಗದ ಮೇಲೆ ತರುವಾಗಲೆಲ್ಲ ಕಥೆಯ ಆಳದಲ್ಲಿನ ಮೌನದೊಳಗಿನ ವಿಷಾದವೆನ್ನುವುದು ಕಥೆಯ ರಂಗಪ್ರಯೋಗದಲ್ಲಿ ಕಳೆದು ಹೋಗುತ್ತದೆ. ಈ ಕಾರಣದಿಂದಲೇ ೨೦೦೭ರಲ್ಲಿ ಕನ್ನಡ ಪುಸ್ತಕ ಪ್ರಾಧಿಕಾರ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯವರ ಸಹಯೋಗದಲ್ಲಿ ನಯನ ಸಭಾಂಗಣದಲ್ಲಿ ನಡೆದ ಜಾದವ್ ಅವರ ನಿರ್ದೇಶನದ ಕಿರಗೂರಿನ ಗಯ್ಯಾಳಿಗಳು ರಂಗಪ್ರಯೋಗದ ಬಗ್ಗೆ 'ಅಶ್ಲೀಲ ಬಯ್ಗುಳಗಳು ರಂಗದ ಮೇಲೆ ತುಂಬ ಕೇಳಿ ಬಂದವು' ಎಂಬ ಆರೋಪ ಬಂದುದುಂಟು.

3.4 ಕೃಷ್ಣೇಗೌಡನ ಆನೆ:

ಜವಾಬ್ದಾರಿಯಿಂದ ನುಣುಚಿಕೊಳ್ಳಲು ಯತ್ನಿಸುವ ಇಡೀ ವ್ಯವಸ್ಥೆಯು ನಿರಪರಾಧಿಯಾದ ಆನೆಯನ್ನು ಅಪರಾಧಿಯನ್ನಾಗಿ ಮಾಡಿಬಿಡುವ ಕಥೆ- ಕೃಷ್ಣೇಗೌಡನ ಆನೆ. ಆರ್.ನಾಗೇಶ್‌ರವರು ಈ ಕಥೆಯ ರಂಗರೂಪವನ್ನು ರಚಿಸಿ, ೨೦೦೨ರಲ್ಲಿ ರಂಗಪ್ರಯೋಗಕ್ಕೆ ತಂದಿರುತ್ತಾರೆ. ಈ ಕಥೆಯ ರಂಗರೂಪವನ್ನು ಪ್ರಯೋಗಿಸುವಲ್ಲಿ ಮುಖ್ಯ ಸವಾಲೇನೆಂದರೆ- ಆನೆಯೇ ಕೇಂದ್ರ ಪಾತ್ರವಾಗಿರುವ ಈ ನಾಟಕದಲ್ಲಿ, ಆನೆಯನ್ನು ರಂಗದ ಮೇಲೆ ತರುವುದು ಹೇಗೆ ಎಂಬುದು? ಸೊಂಡಿಲಿನ ಹಾಗೆ

Cover Page

INTERNATIONAL JOURNAL OF MULTIDISCIPLINARY EDUCATIONAL RESEARCH
ISSN:2277-7881(Print); IMPACT FACTOR :10.16(2026); IC VALUE:5.16; ISI VALUE:2.286
Peer-Peer Reviewed, Refereed & Open Access International Journal - As per UGC Norms
(Fulfilled Suggests Parameters of UGC by IJMER)
Volume:15, Issue:6(1), June 2026
Scopus Review ID: A2B96D3ACF3FEA2A
Article Received: Reviewed: Accepted
Publisher: Sucharitha Publication, India
Online Copy of Article Publication Available: www.ijmer.in

ಹಿಡಿಯಿರುವ ಕಪ್ಪು ಕೊಡೆಯನ್ನೇ ಆನೆಯ ಸಂಕೇತದಂತೆ ಬಳಸಿಕೊಂಡ ನಾಗೇಶ್ ಅವರು ಈ ಕಥೆಯನ್ನು ತುಂಬ ಸುಲಭವಾಗಿ ರಂಗಪ್ರಯೋಗಕ್ಕೆ ತರುವಲ್ಲಿ ಯಶಸ್ವಿಯಾದರು. ಕಥೆಯ ರಂಗಪ್ರಯೋಗವು ಪ್ರೇಕ್ಷಕರನ್ನು ದೃಶ್ಯದಿಂದ ದೃಶ್ಯಕ್ಕೆ ನಕ್ಕುನಲಿಸುತ್ತಾ ಹೋಗುತ್ತದಾದರೂ ನಿರಪರಾಧಿಯು ನಮ್ಮ ಕಣ್ಣಮುಂದೆಯೇ ಅಪರಾಧಿಯಾಗಿ ಸಾಬೀತುಗೊಳ್ಳುವ ಪರಿಯು ಮಾತ್ರ ನಮ್ಮನ್ನು ವಿಷಾದದಲ್ಲಿ ಮುಳುಗಿಸಿಬಿಡುತ್ತದೆ.

4. ಉಪಸಂಹಾರ:

ತೇಜಸ್ವಿಯವರ ಎಲ್ಲ ಕಥೆ-ಕಾದಂಬರಿಗಳು ಸುಲಭವಾಗಿ ಓದಿಸಿಕೊಳ್ಳುವಂಥವು. ಮತ್ತು ಗಂಭೀರವಾಗಿ ಹೇಳಬೇಕಾದುದನ್ನು ಸಹ ತುಂಬ ಸರಳವಾಗಿ ತಮಾಷೆಯೆನ್ನುವಂತೆ ಹೇಳುವ ಕ್ರಮ ತೇಜಸ್ವಿಯವರದು. ವರ್ತಮಾನದ ಜ್ವಲಂತ ಸಮಸ್ಯೆಗಳನ್ನು ಹೀಗೆ ತೇಜಸ್ವಿಯವರಂತೆ ಸಾಮಾನ್ಯರಿಗೆ ತಿಳಿಯುವಂತೆ ಬರೆದವರು ಕಡಿಮೆ. ರಂಗಭೂಮಿಯೆನ್ನುವುದು ಜನಸಾಮಾನ್ಯರಿಗಾಗಿ ಇರುವಂಥದ್ದು. ಬಹುಶಃ ಈ ಕಾರಣಕ್ಕಾಗಿಯೇ ತೇಜಸ್ವಿಯವರ ಕಥೆ-ಕಾದಂಬರಿಗಳು ಹೆಚ್ಚೆಚ್ಚು ರಂಗಪ್ರಯೋಗಗಳಿಗೆ ಒಳಪಟ್ಟಿರಬಹುದು ಎಂದು ನಾವು ಊಹಿಸಬಹುದಾಗಿದೆ.

ಪರಾಮರ್ಶನ ಗ್ರಂಥಗಳು:

1. ಮರುಳಸಿದ್ದಪ್ಪ, ಕೆ. (2002). ಆಧುನಿಕ ಕನ್ನಡ ನಾಟಕ. ಅಂಕಿತ ಪುಸ್ತಕ.

2. ನಾಗೇಶ್, ಆರ್. (1999). ರಂಗಸಂಪನ್ನರು ಮಾಲಿಕೆ–8. ಕರ್ನಾಟಕ ನಾಟಕ ಅಕಾಡೆಮಿ.

3. ಪೂರ್ಣಚಂದ್ರ ತೇಜಸ್ವಿ, ಕೆ. ಪಿ. (1987). ಕೆ.ಪಿ. ಪೂರ್ಣಚಂದ್ರ ತೇಜಸ್ವಿಯವರ ಎಲ್ಲ ಕತೆಗಳು. ಪತ್ರಿಕೆ ಪ್ರಕಾಶನ.

4. ರಂಗನಾಥ್, ಎಚ್. ಕೆ. (2000). ಕರ್ನಾಟಕ ರಂಗಭೂಮಿ. ಕನ್ನಡ ಪುಸ್ತಕ ಪ್ರಾಧಿಕಾರ.